# ಒಂದು ಮೊಟ್ಟೆಯ ಕಥೆ

**ಆಸ್ಟ್ರಿಚ್‌ನ ಒಂದು ಮೊಟ್ಟೆ ಸುಮಾರು ಒಂದೂವರೆ ಕಿಲೋ ತೂಕವಿರುತ್ತದೆ. ಅದರ ಒಂದು ಮೊಟ್ಟೆ ಸೇವಿಸಿದರೆ ಸುಮಾರು 2 ಸಾವಿರ ಕ್ಯಾಲೊರಿ ಶಕ್ತಿ ಸಿಗುತ್ತದೆ. ಆದರೆ, ಆಸ್ಟ್ರಿಚ್ ಮೊಟ್ಟೆ ಸಂಪಾದಿಸುವುದು ಸುಲಭವಲ್ಲ. ಅದೊಂದು ಪ್ರಾಣಾಂತಿಕ ಸಾಹಸ.**



**ಪೃಥ್ವಿರಾಜ್**

ನೆಲದ ಮೇಲೆ ವಾಸಿಸುವ ಹಕ್ಕಿಗಳ ಪೈಕಿ ಅತ್ಯಂತ ದೊಡ್ಡ ಹಕ್ಕಿ ಉಷ್ಟ್ರಪಕ್ಷಿ. ಇದನ್ನು ಇಂಗ್ಲಿಷ್‌ನಲ್ಲಿ ಆಸ್ಟ್ರಿಚ್ (Ostrich) ಎನ್ನುತ್ತಾರೆ. ಈ ಹಕ್ಕಿಯ ದೇಹ ರಚನೆಯಂತೆಯೇ ಅದರ ಮೊಟ್ಟೆ ಕೂಡ ಗಮನ ಸೆಳೆಯುತ್ತದೆ. ನೆಲದ ಮೇಲೆ ವಾಸಿಸುವ ಹಕ್ಕಿಗಳ ಪೈಕಿ ಮೊಟ್ಟೆಗಳ ಪೈಕಿ ಆಸ್ಟ್ರಿಚ್ ಮೊಟ್ಟೆಯೇ ಅತಿ ದೊಡ್ಡದು. ಇದರ ಸ್ವಾರಸ್ಯಗಳು ಹಲವು ಇವೆ.

ಮಾರ್ಚ್–ಆಗಸ್ಟ್ ತಿಂಗಳ ಅವಧಿಯಲ್ಲಿ ಸಂತಾನೋತ್ಪತ್ತಿ ನಡೆಸುವ ಈ ಹಕ್ಕಿ ಒಂದು ಅವಧಿಗೆ 40ರಿಂದ 100 ಮೊಟ್ಟೆಗಳನ್ನು ನೆಲದ ಮೇಲೆ ಎದ್ದು ಕಾಣುವಂತೆ ಇಟ್ಟಿರುತ್ತದೆ. ಆದರೆ ಮೊಟ್ಟೆಗಳಲ್ಲಿ ದುರ್ಬಲವಾದವುಗಳನ್ನು ಪಕ್ಕಕ್ಕೆ ನೂಕಿ ಆರೋಗ್ಯವಾಗಿರುವ ಮೊಟ್ಟೆಗಳನ್ನಷ್ಟೇ ಜೋಪಾನ ಮಾಡುತ್ತದೆ. ಇದು ಗುಂಪಿನಲ್ಲಿ ವಾಸಿಸುವ ಹಕ್ಕಿಯಾಗಿರುವುದರಿಂದ ಒಂದು ಆಸ್ಟ್ರಿಚ್ ಮೊಟ್ಟೆಯಿಟ್ಟರೆ, ಅದೇ ಪ್ರದೇಶದಲ್ಲಿ ಮತ್ತೊಂದು ಹಕ್ಕಿ ಮೊಟ್ಟೆ ಇಡುತ್ತದೆ. ಹೀಗೆ ಗುಂಪಿನ ಎಲ್ಲ ಹಕ್ಕಿಗಳೂ ಮೊಟ್ಟೆಗಳನ್ನು ಇಡುತ್ತವೆ. ಎಲ್ಲ ಮೊಟ್ಟೆಗಳು ಒಂದೇ ಕಡೆ ಇದ್ದರೂ ಆಯಾ ಹಕ್ಕಿಗಳು ತಮ್ಮ ಮೊಟ್ಟೆಗಳನ್ನು ಸುಲಭವಾಗಿ ಪತ್ತೆ ಮಾಡಿ, ಅವುಗಳಿಗಷ್ಟೇ ಕಾವು ಕೊಡುತ್ತವೆ.

ಆಸ್ಟ್ರಿಚ್ ಮೊಟ್ಟೆಗಳಿಗೆ 35ರಿಂದ 45 ದಿನಗಳ ವರೆಗೆ ಕಾವು ಕೊಡಬೇಕಾಗುತ್ತದೆ. ಈ ಅವಧಿಯಲ್ಲಿ ಇವು ಎದುರಿಸುವ ಅಪಾಯಗಳು ಒಂದೆರಡಲ್ಲ. ಹಲವು ಪರಭಕ್ಷಕ ಪ್ರಾಣಿಗಳು ಮೊಟ್ಟೆಗಳನ್ನು ಕಬಳಿಸಲು ಹಲವು ವಿಧದಲ್ಲಿ ಪ್ರಯತ್ನಿಸುತ್ತಿವೆ. ಪ್ರಾಣಿಗಳ ಕಾಟ ಒಂದೆಡೆಯಾದರೆ, ಕೆಲವು ಜನರು ಕೂಡ ಮೊಟ್ಟೆಗಳನ್ನು ಕಬಳಿಸಲು ಪ್ರಯತ್ನಿಸುತ್ತಾರೆ.

ಆಸ್ಟ್ರಿಚ್ ಹಕ್ಕಿಯಂತೆಯೇ ಮೈಗೆ ಬಣ್ಣ ಬಳಿದುಕೊಂಡು, ಅದರ ನೀಳ ಕತ್ತನ್ನು ಹೋಲುವಂತೆ ಕಡ್ಡಿಯೊಂದನ್ನು ಬೆನ್ನಿಗೆ ಸಿಕ್ಕಿಸಿಕೊಂಡು, ಅದರ ತುದಿಯಲ್ಲಿ ಆಸ್ಟ್ರಿಚ್ ಮುಖವನ್ನು ಹೋಲುವ ಆಕಾರವನ್ನು ಸಿಕ್ಕಿಸಿ ಅದಕ್ಕೆ ಗೊಂದಲ ಮೂಡಿಸುತ್ತಾರೆ. ಇಬ್ಬರು ಮೂವರು ಸೇರಿಕೊಂಡು ಅದರ ಗಮನ ಬೇರೆಡೆ ಸೆಳೆದು ಮೊಟ್ಟೆಗಳನ್ನು ಕಬಳಿಸಿ ಪರಾರಿಯಾಗುತ್ತಾರೆ.

ಅದರ ಮೊಟ್ಟೆ ಕಬಳಿಸಲು ಈ ಪರಿಯಾಗಿ ಪ್ರಯತ್ನಿಸಲು ಕಾರಣ, ಆಸ್ಟ್ರಿಚ್‌ನ ದೈತ್ಯ ಶಕ್ತಿ ಮತ್ತು ಸುತ್ತಮುತ್ತಲಿನ ಭೌಗೋಳಿಕ ಸ್ಥಿತಿ. ಈ ಹಕ್ಕಿಗೆ ಹಾರುವ ಶಕ್ತಿ ಇಲ್ಲದಿದ್ದರೂ ಗಂಟೆಗೆ 70 ಕಿ.ಮೀ. ವೇಗದಲ್ಲಿ ಓಡುವ ಸಾಮರ್ಥ್ಯ ಹೊಂದಿದೆ. ಸಿಂಹ ಗರ್ಜಿಸಿದಂತೆ ಜೋರಾಗಿ ಕಿರುಚುತ್ತದೆ. ಕಾಲುಗಳು ದೃಢವಾಗಿರುವುದರಿಂದ ಜಾಡಿಸಿ ಒಮ್ಮೆ ಒದ್ದರೆ ಸಾಕು ಮೂಳೆಗಳು ಮುರಿದು ಹೋಗುತ್ತವೆ.



ಅದರಲ್ಲೂ ಇದು ಅರೆ ಮರುಭೂಮಿಯಂತಹ ಬಯಲು ಪ್ರದೇಶದಲ್ಲಿ ವಾಸಿಸುವುದರಿಂದ ಮನುಷ್ಯ ಎಷ್ಟೇ ವೇಗವಾಗಿ ಓಡಿದರೂ ಅದರಿಂದ ತಪ್ಪಿಸಿಕೊಳ್ಳುವುದು ಕಷ್ಟ. ಹೆಣ್ಣು ಹಕ್ಕಿ ಹಗಲಿನಲ್ಲಿ ಮೊಟ್ಟೆಗಳಿಗೆ ಕಾವು ಕೊಟ್ಟರೆ, ಗಂಡು ಹಕ್ಕಿಗಳು ರಾತ್ರಿಯಲ್ಲಿ ಕಾವು ಕೊಡುತ್ತವೆ. ಹೀಗಾಗಿ ಮೊಟ್ಟೆಗಳು ಪೋಷಕ ಆಸ್ಟ್ರಿಚ್‌ಗಳ ಕಣ್ಗಾವಲಿನಲ್ಲಿ ಸುರಕ್ಷಿತವಾಗಿರುತ್ತವೆ.

## ಆಸ್ಟ್ರಿಚ್ ಮೊಟ್ಟೆ ಏಕೆ?

ಈ ಮೊಟ್ಟೆಗಳು 6 ಇಂಚು ಉದ್ದ, 15ರಿಂದ 18 ಇಂಚು ವ್ಯಾಸವಿರುತ್ತವೆ. ಸುಮಾರು 1.5 ಕೆ.ಜಿ ತೂಕವಿರುತ್ತವೆ. ಮೊಟ್ಟೆಯ ಗೋಡೆಯೇ 0.06 ಇಂಚು ದಪ್ಪ ಇರುತ್ತದೆ. ಹೀಗಾಗಿ ಇವುಗಳ ಮೇಲೆ ಸಾಮಾನ್ಯ ಮನುಷ್ಯ ನಿಂತರೂ ಒಡೆದುಹೋಗುವುದಿಲ್ಲ. ಇದರ ಒಂದು ಮೊಟ್ಟೆ ಸೇವಿಸಿದರೆ ಸುಮಾರು 2 ಸಾವಿರ ಕ್ಯಾಲೊರಿ ಶಕ್ತಿ ಸಿಗುತ್ತದೆ. ಇದು ಶೇ 47ರಷ್ಟು ಪ್ರೊಟೀನ್ ಅಂಶ, ಶೇ 44ರಷ್ಟು ಕೊಬ್ಬಿನಂಶವನ್ನು ಒಳಗೊಂಡಿರುತ್ತದೆ. ಇದಷ್ಟೇ ಅಲ್ಲದೇ, ಕ್ಯಾಲ್ಸಿಯಂ, ಫಾಸ್ಪರಸ್, ಮೆಗ್ನೆಷಿಯಂ, ಮ್ಯಾಂಗನೀಸ್, ಜಿಂಕ್, ತಾಮ್ರ, ಕಬ್ಬಿಣದ ಅಂಶ ಮತ್ತು ವಿಟಮಿನ್ ಎ, ವಿಟಮಿನ್ ಜೀವ ಸತ್ವಗಳನ್ನು ಹೊಂದಿರುವುದರಿಂದ ಎಲ್ಲ ಬಗೆಯ ಪೋಷಕಾಂಶಗಳು ಇದರಿಂದ ಸಿಗುತ್ತವೆ ಎಂದು ಸಂಶೋಧಕರು ಪತ್ತೆ ಮಾಡಿದ್ದಾರೆ. ಹೀಗಾಗಿಯೇ ಆಸ್ಟ್ರಿಚ್ ಮೊಟ್ಟೆಗಳನ್ನು ಕಬಳಿಸಲು ಹಲವರು ಪ್ರಯತ್ನಿಸುತ್ತಿರುತ್ತಾರೆ. ಆಹಾರಕ್ಕಾಗಿ ಮಾತ್ರವಲ್ಲದೇ, ಬಗೆ ಬಗೆಯ ಕರಕುಶಲ ವಸ್ತುಗಳನ್ನೂ ಮೊಟ್ಟೆಯಿಂದ ತಯಾರಿಸುತ್ತಾರೆ.